(b) if so, what happens to the proposed expansion programme of the said Karkhane;

(c) the reasons why the Karkhane was registered as a separate Company, when it was intended to be merged in NGEF Ltd. ?

SRI AZEEZ SAIT (Minister for Industries and Commerce).—

(a) There is no such proposal.

(b) and (c) This does not arise in view of the reply to (a) above.

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್.—ಜಿ.ಇ.ಎಫ್ ಕಾರ್ಖಾನೆಯು ಯಾವ ರೀತಿಯಲ್ಲಿ ನಡೆಯುತ್ತಿದೆ ಎಂಬುದು ತಮ್ಮ ಅವಗಾಹನೆಗೆ ಬಂದಿದೆ. ಈಗ ಈ ಕಾರ್ಖಾನೆಯನ್ನು ಎನ್.ಜಿ.ಇ. ಎಫ್. ಕಾರ್ಖಾನೆಯೊಂದಿಗೆ ವಿಲೀನಗೊಳಿಸುತ್ತಾರೆಂಬ ವಿಚಾರ ಜನಜನಿತವಾಗಿದೆ, ಹೀಗಿದ್ದರೂ ತಾವು ಸತ್ಯಕ್ಕೆ ದೂರವಾದ ಉತ್ತರವನ್ನು ಏತಕ್ಕೆ ಕೊಟ್ಟಿದ್ದೀರಿ.

† SRI AZEEZ SAIT.—The hon. member wanted to know whether there was any attempt to merge this KAVIKA with N.G.E.F. The answer to that is 'no'. It is a separate company formed and already working.

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್.—ನನ್ನ "ಆ" ಪ್ರಶ್ನೆಗೆ ಉತ್ತರಿಸುತ್ತಾ 'ಆ' ಭಾಗಕ್ಕೆ ಕೊಟ್ಟಿರುವ ಉತ್ತರವನ್ನು ನೋಡಿದಲ್ಲಿ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ. ಎಂದು ಹೇಳಿದ್ದೀರಿ. ಈ ಜಿ.ಇ.ಎಫ್. ಕಾರ್ಖಾನೆಯನ್ನು ವಿಸ್ತರಣೆ ಮಾಡುವ ವಿಷಯ ಬಹಳ ದಿವಸಗಳಿಂದಲೂ ಕೇಳಿಬರುತ್ತಿದೆ. ಆದರೆ ತಮ್ಮ ಉತ್ತರವನ್ನು ನೋಡಿ ಈ ವಿಷಯವನ್ನು ಕೈ ಬಿಟ್ಟಿದ್ದೀರೆಂದು ನಾವು ತಿಳಿದುಕೊಳ್ಳೋಣವೇ?

SRI AZEEZ SAIT.—Once it was examined whether it could be merged with the N.G.E.F. Later on it was decided that the proposal was not feasible. A separate company has been formed in 1973-74. We are not thinking of merging. A separate company has been formed and it is working.

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್.—ಸ್ವಾಮಿ ಈಗ ಕರ್ನಾಟಕ ವಿದ್ಯುತ್ ಕಾರ್ಖಾನೆಯಲ್ಲಿ ಪೆಯ್ಡ್ ಆಫ್ ಕ್ಯಾಪಿಟಲ್ ಏನು ಇರುತ್ತದೆ. ಆದರ ಲಾಭಾಂಶವೇನು ? ಆದರಿಂದ ಲಾಭ ಬಂದಿರುತ್ತದೆಯೇ? ಹಾಗೆ ಬಂದಿದ್ದರೆ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತಿದೆಯೇ ಇಲ್ಲ ಬಾಕಿ ಇದೆಯೇ?

SRI AZEEZ SAIT.—In answer to(a), I have said that there is no such proposal. If the hon. member wants to know the details about the working of the company which was formed in 1977-78, let him put a separate question and I will be able to furnish the replies.

Legislator's Home Extension Building

724 SRI B.V. RAMACHANDRA REDDY (Varthur)—Will the Minister for Public Works be pleased to state.—

(a) whether it is a fact that earth work for the construction of Legislator's Home extension building at Bangalore has been given on contract without alling for tenders;

(b) whether it is a fact that the main building work also will be given on contract without calling for tenders;

(c) if so, what was the need to violate the rules of PWD ?

SRI S. BANGARAPPA (Minister for Public Works).—

(a) No. The work has not been given on contract. it has been taken up on departmental-cum-piece work basis.

(b) The main building work will also be taken up on departmental-cum-piece work basis.

(c) Does not arise in view of reply to clause(b).

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ —ಸ್ವಾಮಿ ನಿಮ್ಮ ಇಲಾಖೆಯ ನಿಯಮಾವಳಿ ಪ್ರಕಾರವಾಗಿ ೧೦ ಸಾವಿರಕ್ಕಿಂತ ಹೆಚ್ಚು ವರಿ ಇರತಕ್ಕಂಥ ಕೆಲಸಗಳನ್ನು ಟೆಂಡರ್ ಮುಖಾಂತರವಾಗಿ ವಿಲೇವಾರಿ ಮಾಡಬೇಕು ಎಂದು ಇರುತ್ತದೆ. ಆದರೆ ಶಾಸಕರ ಗೃಹದ ವಿಸ್ತರಣಾ ಕಟ್ಟಡದ ನಿರ್ಮಾಣ ಕಾರ್ಯವನ್ನು ಟೆಂಡರ್ ಆಧಾರದ ಮೇಲೆ ವಿಲೇವಾರಿ ಮಾಡದೆ ಚಿಲ್ಲರೆಯಾಗಿ ಕೆಲಸ ಮಾಡಲು ಕೊಟ್ಟಿರುತ್ತೀರಿ ಇದಕ್ಕೆ ಕಾರಣ ವೇನು ತಿಳಿಸಬೇಕು.

† ಶ್ರೀ ಎಸ್. ಬಂಗಾರಪ್ಪ.—ಹತ್ತು ಸಾವಿರಕ್ಕಿಂತ ಮೇಲ್ಪಟ್ಟಿರತಕ್ಕಂಥ ಕೆಲಸಗಳಿಗೆ ಟೆಂಡರ್‌ನ್ನು ಕರಿಯಲೇಬೇಕೆಂದು ಕಡ್ಡಾಯವೇನು ಇರುವುದಿಲ್ಲ. ಕೆಲಸವನ್ನು ಇಲಾಖೆಯವರೇ ತೆಗೆದುಕೊಂಡು ಮಾಡುತ್ತಿರುವುದಕ್ಕೆ ಮಾನ್ಯ ಸದಸ್ಯರು ಸಂತೋಷವನ್ನು ವ್ಯಕ್ತಪಡಿಸಬೇಕು. ಕೆಲಸ ಜಾಗ್ರತೆಯಾಗಿ ಮುಗಿಯಬೇಕು ಎನ್ನುವ ದೃಷ್ಟಿಯಿಂದ ಚಿಲ್ಲರೆ ಕೆಲಸದ ಆಧಾರದ ಮೇಲೆ ಇಲಾಖೆಯವರು ತೆಗೆದು ಕೊಂಡಿರುವುದಾಗಿರುತ್ತದೆ.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ನಿಯಮಾವಳಿ ಇಲ್ಲದಿದ್ದರೆ, ಕಡ್ಡಾಯವಿಲ್ಲದಿದ್ದರೆ ನಿಯಮಾವಳಿಯನ್ನು ಏತಕ್ಕೆ ಇಟ್ಟುಕೊಂಡಿರುತ್ತೀರಿ?

ಶ್ರೀ ಎಸ್. ಬಂಗಾರಪ್ಪ.—ಕೊಡಬಹುದು ಅಥವಾ ಕೊಡದೆ ಇರಬಹುದು. ಆ ಒಂದು ದೃಷ್ಟಿಯಿಂದ ನಿಯಮಾವಳಿಯನ್ನು ಇಟ್ಟುಕೊಂಡಿರುತ್ತೇವೆ.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ಶಾಸಕರ ಭವನದ ವಿಸ್ತರಣ ಯೋಜನೆಯ ಮೊದಲನೆಯ ಹಂತವನ್ನು ಇಲಾಖೆಯವರು ಮಾಡಿದರು. ಎರಡನೆಯ ಹಂತವನ್ನು ಟೆಂಡರ್ ಮೂಲಕ ವಿಲೇವಾರಿ ಮಾಡಿದರು. ಮೂರನೆಯ ಹಂತವನ್ನು ಹಿಂದಿನ ಅನುಭವದ ಆದಾರದ ಮೇಲೆ ಮಾಡುತ್ತಿದ್ದಾರೆಯೇ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. ಶಾಸಕರ ಭವನದಲ್ಲಿ ೧೦೦ ಕೊಟಡಿಗಳು ಅತಿ ಶೀಘ್ರವಾಗಿ ಬೇಕಾಗಿರತಕ್ಕಂಥಾದಲ್ಲಿ ತಮಗೆಲ್ಲ ಗೊತ್ತಿರ ತಕ್ಕಂಥ ವಿಚಾರವಾಗಿರುತ್ತದೆ. ಇದಕ್ಕೋಸ್ಕರವಾಗಿ ಡಿಸೆಂಬರ್ ತಿಂಗಳಲ್ಲಿ ಒಂದು ಮಿಟಿಂಗ್ ಕರೆದು ಕೆಲಸವನ್ನು ತೆಗೆದುಕೊಂಡಿರುತ್ತದೆ.

ಶ್ರೀ ಬಿ.ವಿ. ರಾಮಚಂದ್ರರೆಡ್ಡಿ.—ಹಿಂದೆ ಕೊಟ್ಟಿರತಕ್ಕಂಥ ೪೦ ರೂಮ್‌ಗಳು ಟೆಂಡರ್ ಮೂಲಕ ಕೊಟ್ಟಿರುವುದೇ? ಅಥವಾ ಡಿಪಾರ್ಟ್‌ಮೆಂಟ್ ಕಟ್ಟಿರತಕ್ಕಥಾದ್ದೆ?

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ಮಾನ್ಯ ಸದಸ್ಯರು ಪ್ರತ್ಯೇಕವಾಗಿ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ.—The main building work will also be taken up on departmental cum piece work basis ಎಂದು ಹೇಳಿದ್ದೀರಿ, ಕನ್ನಡದಲ್ಲಿ ಪ್ರಧಾನ ಕಟ್ಟಡದ ಕಾಮಗಾರಿಯನ್ನು ಸಹ ಚಿಲ್ಲರೆ ಕೆಲಸದ ಆಧಾರದ ಮೇರೆಗೆ ಇಲಾಖಾ ಮೂಲಕ ಕೈಕೊಳ್ಳಲಾಗುವುದು ಎಂದು ಹೇಳಿರುತ್ತೀರಿ, ಇದಕ್ಕೂ ಅದಕ್ಕೂ ವ್ಯತ್ಯಾಸವೇನು ಇಲ್ಲವೆ ?.

ಶ್ರೀ ಎಸ್. ಬಂಗಾರಪ್ಪ —ಇದಕ್ಕೂ ಅದಕ್ಕೂ ಏನು ವ್ಯತ್ಯಾಸವಿಲ್ಲ. ಇಂಗ್ಲೀಷ್‌ನಲ್ಲಿರುವುದನ್ನು ಕನ್ನಡದಲ್ಲಿ ತರ್ಜಮೆ ಮಾಡಿರುತ್ತದೆ ಅಷ್ಟೆ.

SRI C.M. ARMUGHAM.—May I know when the work was taken up, what is the progress and when it is expected to be completed?

SRI S. BANGARAPPA.—The foundation work is in progress. The estimated cost of work is nearly Rs. 80 lakhs. and the budget allotment is also provided. We would like to complete the work as early as possible.

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ —ಚಿಲ್ಲರೆ ಕೆಲಸಕ್ಕೂ, ಕಾಂಟ್ರಾಕ್ಟ್ ಕೆಲಸಕ್ಕೂ ವ್ಯತ್ಯಾಸ ವಿರುತ್ತದೆ. ಈಗ ಕೆಲಸ ನಡೆಯುತ್ತಿರುವುದಕ್ಕೂ ನಿಯಮಾವಳಿಯಲ್ಲಿರತಕ್ಕಂಥ ರೇಟ್‌ಗೂ ವ್ಯತ್ಯಾಸ ವಿರುತ್ತದೆ, ಆದ್ದರಿಂದ ಯಾವ ಆಧಾರದಮೇಲೆ ಕೆಲಸ ನಡೆಯುತ್ತಿದೆ ಎಂಬುದನ್ನು ತಿಳಿಸಬೇಕು?

ಶ್ರೀ ಎಸ್ ಬಂಗಾರಪ್ಪ.—ಸರ್ಕಾರಿ ರೇಟ್ ಏನು ಇರುತ್ತದೆ. ಅದರ ಆಧಾರದ ಮೇಲೆಯೇ ಕೆಲಸ ನಡೆಯುತ್ತಿದೆ.

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ.—ಈಗ ಜೆಲ್ಲಿ, ಮರಳು ಮತ್ತು ಮಣ್ಣಿನ ಕೆಲಸ ಏನು ಮಾಡುತ್ತಿರುತ್ತಾರೆ ಅದಕ್ಕೆ ಕೊಟ್ಟಿರುವ ದರಗಳು ಷೆಡ್ಯೂಲ್ ಪುಸ್ತಕದಲ್ಲಿರುವ ದರಕ್ಕೂ ವ್ಯತ್ಯಾಸ ವಿರುತ್ತದೆ. ಆರಂಭದಲ್ಲಿಯೇ ಶೇಕಡಾ ೩ ರಷ್ಟು ಹೆಚ್ಚುವರಿ ದರಗಳನ್ನು ಕೊಡುತ್ತಿದ್ದೀರಿ ಷೆಡ್ಯೂಲ್ ರೇಟ್ಸ್ ಏನು ಇರುತ್ತದೆ ಅದಕ್ಕಿಂತಲೂ ಹೆಚ್ಚುವರಿ ದರಗಳನ್ನು ಕೊಡುತ್ತಿದ್ದೀರಿ ಇದನ್ನು ನೋಡಿದರೆ ಕೆಲವು ಇಲಾಖಾ ಅಧಿಕಾರಿಗಳು ಹಣವನ್ನು ಮಾಡಿಕೊಳ್ಳುವುದಕ್ಕೊಸ್ಕರವಾಗಿ ಟೆಂಡರ್‌ನ್ನು ಕರೆಯದೆ ಈ ರೀತಿ ಕೆಲಸ ಮಾಡುತ್ತಿದ್ದಾರೆಂದು ಭಾಸವಾಗುತ್ತದೆ. ಆದ್ದರಿಂದ ಷೆಡ್ಯೂಲ್ ರೇಟ್ಸ್‌ಗಿಂತ ಜಾಸ್ತಿ ಏನಾದರೂ ತೆಗೆದುಕೊಂಡರೆ ಅದನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯಸದಸ್ಯರು ಇಂಜಿನಿಯರ್ ಇದ್ದರೂ ಕೆಲಸ ಮಾಡಿದ್ದಾರೋ ಇಲ್ಲವೊ ಗೊತ್ತಿಲ್ಲ. ಟೆಂಡರ್ ಕರೆಯದೆ ಇಲಾಖೆಯವರು ಹಣವನ್ನು ಮಾಡಿಕೊಳ್ಳುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆಂದು ಹೇಳುತ್ತಿರುವುದು ಸತ್ಯಕ್ಕೆ ದೂರವಾದ ಮಾತಾಗಿರುತ್ತದೆ ಇಲಾಖೆಯವರೇ ಒಂದು ಒಳ್ಳೆಯ ಕೆಲಸವನ್ನು ಮಾಡಲು ಸಾಧ್ಯವಿದ್ದರೆ ಏತಕ್ಕೆ ಮಾಡಬಾರದೆಂಬುದನ್ನು ಮಾನ್ಯ ಸದ್ಯ ಸರು ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ.—ಮತ್ತೊಂದು ಪ್ರಶ್ನೆ.

ಸಭಾಪತಿಯವರು —ಮಾನ್ಯ ರೆಡ್ಡಿಯವರೆ ತಮಗೆ ಸಾಕಷ್ಟು ಸಪ್ಲಿಮೆಂಟರಿ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಟ್ಟಿರುತ್ತೇನೆ. ತಾವು ಮತ್ತೆ ಮತ್ತೆ ಈ ರೀತಿ ಕೇಳುತ್ತಿರುವುದು ಸರಿಯಲ್ಲ, ತಾವು ಕುಳಿತುಕೊಳ್ಳಬೇಕು.

ಶ್ರೀ ಬಿ.ವಿ. ರಾಮಚಂದ್ರ ರೆಡ್ಡಿ.—ಇದು ಸರ್ಕಾರದ ಖಿಜಾನೆಗೆ ಲುಕ್ಸಾನಾಗುತ್ತಿರುವ ವಿಚಾರವಾಗಿರುತ್ತದೆ. ತಾವು ಕುಳಿತುಕೊಳ್ಳಬೇಕೆಂದು ಹೇಳಿದರೆ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು—ನಾನು ಏದ್ದುನಿಂತು ಹೇಳುತ್ತಿದ್ದಾಗ ತಾವು ಮಾತನಾಡುತ್ತಿರುವುದು ಮೊದಲನೆಯ ತಪ್ಪಾಗುತ್ತದೆ, ದಯವಿಟ್ಟು ತಾವು ಕುಳಿತುಕೊಳ್ಳಿ.

SRI S. R. BOMMAI.—The hon. member has sought certain answers from the Minister; if the Minister does not answer to his questions, naturally, he will have to repeat the questions. The Chair should also see that the Hon. Minister answers to the questions. The Hon.

member has asked: certain contracts have been given in contravention of the prescribed rates by the Government; whether it is a fact or not; if that is so, what is the action the Hon. Minister will take?

SRI S. BANGARAPPA.—The same question is being repeated by the Leader of the Opposition. The question pertains to the rates given which are more than the schedule rates. The procedure that is set in the past is being followed in this work also. In special types of works there has been a practice in the department to give a little more rate which is more than the schedule rate in respect of that particular year. The some thing has been followed so far as this work is concerned.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ಶೇಕಡ ೧೦೦ರಷ್ಟು ಹೆಚ್ಚು ಬೆಲೆಯನ್ನು ಕೊಟ್ಟಿರುವುದರಿಂದ ಏನೋ ಒಂದು ಉದ್ದೇಶ ಇಟ್ಟುಕೊಂಡು ಈ ಕೆಲಸ ಮಾಡಿದ್ದಾರೆ ಎಂಬ ಶಂಕೆ ಬಂದಿದೆ. ಈ ರೀತಿ ೧೦೦ ಪರ್ಸೆಂಟ್ ಹೆಚ್ಚು ರೇಟನ್ನು ಕೊಡುವುದಕ್ಕೆ ಕಾರಣವೇನು ಸ್ವಾಮಿ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯಲ್ಲಿ ರೇಟ್ಸ್ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಮಾನ್ಯ ಸದಸ್ಯರು ಒಂದು ವೇಳೆ ಬೇರೆ ಪ್ರಶ್ನೆಯನ್ನು ಹಾಕಿರುವುದಾದರೆ ನಾನು ಯಾತಕ್ಕಾಗಿ ಪೆಚ್ಚು ರೇಟ್ಸ್ ಕೊಟ್ಟಿದ್ದೇವೆ ಎಂಬುದಕ್ಕೆ ಸಕಾರಣವನ್ನು ನೀಡಿ ಉತ್ತರವನ್ನು ಸದನದ ಮುಂದಿಡಲು ಸಿದ್ಧನಾಗಿದ್ದೇನೆ. ಆದರೆ ಈಗ ಆ ವರದಿ ನನ್ನ ಹತ್ತಿರ ಇಲ್ಲ.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ಮೊದಲನೇ ಹಂತದ ಕಾರ್ಯವನ್ನು ಮಾಡಿರುವ ಬಗ್ಗೆ ಮಾಹಿತಿಗಳು ನನ್ನ ಹತ್ತಿರ ಇಲ್ಲವೆಂದು ಹೇಳಿದ್ದೀರಿ. When the department took over the work, they took three years for the completion of the work and the work was completed at the cost of 50% more than the estimated rate. ಎರಡನೇ ಹಂತದ ಕಟ್ಟಡವನ್ನು ಟೆಂಡರ್ ಕರೆದು ಕಟ್ಟಿಸಿದಾಗ ಸರ್ಕಾರಕ್ಕೆ ಉಳಿತಾಯವಾಗುವಂತಹ ರೀತಿಯಲ್ಲಿ ಕಡಿಮೆ ವೇಳೆಯಲ್ಲಿ ಕೆಲಸವಾಗಿದೆ. ಅದೇ ಏಜೆನ್ಸಿಯವರು ನಮಗೇ ಮುಂದಿನ ಕೆಲಸವನ್ನೂ ವಹಿಸಿದರೆ ಅದೇ ದರದಲ್ಲೇ ಉಳಿದ ಕೆಲಸವನ್ನೂ ಮಾಡಿಕೊಡುತ್ತೇವೆ ಎಂದು ಹೇಳಿದ್ದರು. ಅಂಥ ಒಂದು ಅವಕಾಶವನ್ನು ಬಿಟ್ಟು ಇಲಾಖಾ ಮೂಲಕ ಕೆಲಸವನ್ನು ಪೂರೈಸಿ ಇಷ್ಟೊಂದು ಪೆಚ್ಚು ಹಣ ದಂಡ ಮಾಡುವುದಕ್ಕೆ ಕಾರಣವೇನು?

ಶ್ರೀ ಎಸ್. ಬಂಗಾರಪ್ಪ.—ನಾನು ಈಗಾಗಲೇ ಹೇಳಿದ್ದೇನೆ, ಮಾನ್ಯ ಸದಸ್ಯರ ಮುಖ್ಯವಾಗಿರತಕ್ಕ ಪ್ರಶ್ನೆ ಈಗ ನಡೆಯುತ್ತಿರತಕ್ಕ ಮೂರನೇ ಹಂತದ ಕೆಲಸಕ್ಕೆ ಸಂಬಂಧಿಸಿದ್ದು. ಆದರೆ ಮಾನ್ಯ ಸದಸ್ಯರು ಈಗ ಹಿಂದಿನ ಎರಡು ಕೆಲಸಗಳ ಬಗ್ಗೆ ಕೇಳುತ್ತಿದ್ದಾರೆ. ಅವರಿಗೆ ಬೇಕಾದ ಎಲ್ಲಾ ವಿಷಯಗಳನ್ನೂ ಸೇರಿಸಿ ಬೇರೆ ಒಂದು ಪ್ರಶ್ನೆ ಕಳಿಸಿದರೆ ನಾನು ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ.

SRI S. R. BOMMAI.—At the earlier stage the work was got done through a contractor at a shorter time and at a lessor cost; this being so, what was the necessity for the Government to take it departmentally?

ಶ್ರೀ ಎಸ್. ಬಂಗಾರಪ್ಪ.—ನಾನು ಈಗಾಗಲೇ ಹೇಳಿದ್ದೇನೆ, ಈಗ ಮಾನ್ಯ ಸದಸ್ಯರ ಪ್ರಶ್ನೆ ಮೂರನೇ ಹಂತದ ಕಟ್ಟಡಕ್ಕೆ ಸಂಬಂಧಿಸಿದ್ದು. ಹಿಂದೆ ನಡೆದಿರುವ ಕೆಲಸದ ಬಗ್ಗೆ ಬೇರೆ ಪ್ರಶ್ನೆಯನ್ನು ಕೇಳಿದರೆ ನಾನು ಉತ್ತರ ಕೊಡುವುದಕ್ಕೆ ಸಿದ್ಧನಾಗಿದ್ದೇನೆಂಬ ಮಾತನ್ನು ನಾನು ಹೇಳಿದ್ದೇನೆ. ಕಡಿಮೆ ವೆಚ್ಚದಲ್ಲಿ ಕೆಲಸ ಆಗುವ ಹಾಗಿದ್ದರೆ ಕಂಟ್ರಾಕ್ಟರಿಗೆ ಕೊಟ್ಟು ಯಾತಕ್ಕೆ ಕೆಲಸವನ್ನು ಮಾಡಿಸುವಾರದಾಗತ್ತು ಎಂದು ಮಾನ್ಯ ಸದಸ್ಯರು ಕೇಳಿರುವುದು ಸರಿ. ಆದರೆ ನನಗೆ ಈಗ ಆ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಬೇರೆ ಪ್ರಶ್ನೆ ಕೇಳಿದರೆ ನಾನು ಉತ್ತರ ಕೊಡುತ್ತೇನೆ.

MR. SPEAKER.—Question Hour is over.